ನಿಧಾನವಾಗಿ ಕೆಳಭಾಗದಿಂದ ನಾಜೂಕಾಗಿ ಮುದ್ರೆಯ ಮೇಲ್ಭಾಗದ ಕಾಗದವನ್ನು ಮುಟ್ಟುವವರೆಗೂ ಕೈನಡುಗದಂತೆ ಒತ್ತಿ ಹಿಡಿದು – ಫಕ್ಕನೆ ಮುದ್ರೆಯನ್ನೆತ್ತಿ 'ಉಫ್' ಎಂದು ಉಸಿರು ಊದಿ ಅದನ್ನು ಒಣಗಿಸುವವರನ್ನು ಕಂಡಿದ್ದೇನೆ. ಇಂಥವರು ತಮ್ಮ ಅಧಿಕಾರವನ್ನು ಪ್ರದರ್ಶಿಸಲು ಇಷ್ಟಪಡದವರು. ಅವರಿಗೆ ಕೆಲಸ ಮುಖ್ಯವೇ ಹೊರತು ಅದರ ಘನತೆಯ ಪರವಾನಗಿಯಿಲ್ಲ. ಜೊತೆಗೆ ನಿರ್ದಿಷ್ಟ ಜಾಗದಿಂದಾಚೆಗೆ ಬರದ ಮುದ್ರೆ ಯಾವ ಸೀಮೆಯ ಅಧಿಕಾರದ ಪ್ರತೀಕವಾಗುತ್ತದೆ? ಈ ರೀತಿಯಾಗಿ ನೀಟಾಗಿ ಮುದ್ರೆಯೊತ್ತುವವರು ಅಧಿಕಾರದ ಗತ್ತು ಎಂದರೇನೆಂದು ತಿಳಿಯದವರು. ಮುದ್ರೆಯಿಂದ ಕಾಗದ, ಅದರ ಮೇಲಿರುವ ಬರವಣಿಗೆಯ ಮೇಲೆ ಏನೂ ಪ್ರಭಾವವಾಗದಂತೆ ಕಾಣದಿದ್ದರೆ ಅದೆಂಥಹ ಮುದ್ರೆ?

ಅದೇ ಬೇರೆಡೆ ನೋಡಿ... ಎಷ್ಟು ಬಲಪ್ರದರ್ಶನ ಮಾಡಿ ಮುದ್ರೆಯನ್ನು ಜಡಿಯಬಹುದೋ ಅಷ್ಟೇ ಹೆಚ್ಚಿನ ಅಧಿಕಾರ ಪ್ರಯೋಗವಾಗುತ್ತಿದೆ ಎನ್ನುವುದು ನಮಗೆ ತಿಳಿಯುತ್ತದೆ. ಆದರೆ ಕಾಲಾನುಕ್ರಮದಲ್ಲಿ ಆಧುನಿಕತೆಯು ಮುದ್ರೆಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿದ್ದಲ್ಲದೇ ಅಧಿಕಾರದ ಗತ್ತನ್ನೂ ಕಿರಿದಾಗಿಸುತ್ತಿದೆ. ಇದರ ಹೊಳಹುಗಳು ನಮಗೆ ಕಂಪ್ಯೂಟರುಗಳೊಂದಿಗೆ ಬಂದ ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರುಗಳಿಂದ ಮೊದಲಿಗೆ ಸಿಕ್ಕಿದುವು. ಇದು ಕಂಪ್ಯೂಟರಿನಿಂದ ಅಚ್ಚುಮಾಡಿದ ಪತ್ರ, ಇದಕ್ಕೆ ದಸ್ತಕತ್ತಿಲ್ಲ, ಎನ್ನುವ ಅಡಿಟಿಪ್ಪಣಿಯೊಂದಿಗೆ ಬರುತ್ತಿದ್ದ ಪತ್ರಗಳನ್ನು ಕಂಡಾಗ ಅವುಗಳಲ್ಲಿ ನಂಬಿಕೆ ಮುಂದುವರೆಯುವುದು ಹೇಗೆನ್ನುವ ಮಾತು ನಮ್ಮೆದುರಿಗೆ ನಿಂತಿತ್ತು. ಆ ನಂತರ ಚೌಕ ಮುದ್ರೆಗಳ ತೂಕವೂ ಕಡಿಮೆಯಾಗಿ ಸ್ವತಃ ಇಂಕನ್ನು ತುಂಬುವ, ಉಕ್ಕಿನ ಜಾಗಕ್ಕೆ ಪ್ಲಾಸ್ಟಿಕ್ಕನ ಕವಚವಿದ್ದ ಮುದ್ರೆಗಳು ಬಂದುವು. ಮೂರು ಮೂರು ಬಾರಿ ಸ್ಟಾಂಪ್‌ಪ್ಯಾಡಿನಲ್ಲಿ ಕುಟ್ಟಿ ಗುದ್ದುವ ಮುದ್ರೆ ಎಷ್ಟು ಸ್ಪಷ್ಟವಾಗಿರಬಹುದೆಂದು ಅಧಿಕಾರಿ ತನ್ನ ಕೈಚಳಕದಿಂದ ನಿಗದಿ ಪಡಿಸಬಹುದಿತ್ತು. ಆದರೆ ಆಧುನಿಕ ಮುದ್ರೆಗಳು ಸ್ಪಷ್ಟ ಅಕ್ಷರಗಳನ್ನು ತೋರುತ್ತಾ ಪಾರದರ್ಶಕತೆಯತ್ತ ವ್ಯವಹಾರಗಳನ್ನು ಒಯ್ದುವು. ಪಾರದರ್ಶಕತೆಯು ಅಧಿಕಾರದ ವಿರೋಧಿ ಎಂದು ನನಗೆ ಮನವರಿಕೆಯಾದದ್ದು ಆಗಲೇ.

ಮುದ್ರೆಗೂ, ಗತ್ತಿಗೂ ಇರುವ ಸಂಬಂಧವನ್ನು ನಾವು ಅರಿಯಬೇಕೆಂದರೆ ರವಾನೆಯ ಹೈರಾರ್ಕಿಯನ್ನು ಅರಿತರೆ ಸಾಕು. ಆಟೊದಲ್ಲಿ ಟಿಕೆಟ್ಟಿಲ್ಲ, ಮೀಟರಿದ್ದರೆ ಇತ್ತು, ಇಲ್ಲವಾದರೆ ಚೌಕಾಸಿ. ಒಂದು ರೀತಿಯಿಂದ ಪಾರದರ್ಶಕತೆಯಿಲ್ಲದ ಅನಾಮಿಕ ಯಾನ. ಸರಕಾರಿ ಪರಿವಹನಕ್ಕೆ ಬಂದರೆ ಬಸ್ಸು, ಬಸ್ಸಿನ ಟಿಕೆಟ್ಟಿನಲ್ಲಿ ಯಾವ ಮುದ್ರೆಯೂ ಇಲ್ಲ. ಬದಲಿಗೆ ಕಂಡಕ್ಟರು ಟಿಕೆಟ್ ಹರಿದು, ಅಥವಾ ಅದಕ್ಕೊಂದು ಸಣ್ಣ ಯಂತ್ರದಿಂದ ತೂತು ಕೊರೆದು ತನ್ನ ಅಧಿಕಾರವನ್ನು ಪ್ರಯೋಗಿಸುತ್ತಿದ್ದ (ಈಗೀಗ ಅಲ್ಲಿಯೂ ಯಂತ್ರದ ಟಿಕೆಟ್ಟು). ರೈಲಿನಲ್ಲಿ ಟಿಕೆಟು ಪುಟ್ಟದಾಗಿ ಮುದ್ರೆಗೆ ಅವಕಾಶವಿಲ್ಲದಂತಿದ್ದರೂ ಅದನ್ನು ಕೊಟ್ಟ ತಾರೀಖಿನ ದ್ಯೋತಕವಾಗಿ ಒಂದು ಯಂತ್ರದಲ್ಲಿ ಧಡ್ಡೆಂದು ತೂರಿಸಿ, ತಾರೀಖನ್ನು ಟಂಕಿಸುತ್ತಿದ್ದರು. ಆದರೆ ವಿಮಾನಯಾನಕ್ಕೆ ಮಾತ್ರ ಒಂದು ಘನತೆಯಿತ್ತು. ಟಿಕೆಟು ಬ್ಯಾಂಕಿನ ಚೆಕ್ ಬುಕ್ಕಿನಂತೆ ಕಾಣುತ್ತಿತ್ತು. ಅನೇಕ ಹಾಳೆಗಳಿರುತ್ತಿದ್ದುವು. ಮತ್ತು ಟಿಕೆಟು ಓಕೆ ಎನ್ನುವುದರ ಮೇಲೆ ವಿಮಾನಸಂಸ್ಥೆಯ ಗುಂಡು ಸೀಲು, ದಸ್ತಕತ್ತು ಇರುತ್ತಿತ್ತು. ಘನತೆಯ ಪ್ರಾಮುಖ್ಯತೆ ಅಲ್ಲೇ ನಮಗೆ ತಿಳಿದಿರಬಹುದು. ಅಲ್ಲಿಂದ ಮುಂದಕ್ಕೆ ಲಗೇಜಿಗೂ, ಕೈಚೀಲಕ್ಕೂ ಮುದ್ರೆ... ವಿಮಾನಯಾನ ಎಷ್ಟು ಘನತೆಯ ವಿಷಯವೋ ಊಹಿಸಿಕೊಳ್ಳಿ...

ಇಂಥ ಘನತೆಯ ವಿಷಯವನ್ನು ತುಚ್ಛೀಕರಿಸುವುದು ಯಾವ ನ್ಯಾಯ? ವಿಮಾನಯಾನದ ಘನತೆಗೆ ಮೊದಲಿನ ಧಕ್ಕೆ ತಂದವರು ಕನ್ನಡಿಗರೇ ಆದ ಜಿ.ಆರ್. ಗೋಪೀನಾಥ್. ಅವರು 'ಏರ್